Sri K. LAKKAPPA.—Sir, it was said that Co-operation Department is a developing department. Instead of that, is it not a sinking department? Is there not sinking in the department?

Sri KONDAJJI BASAPPA.—It is a matter of opinion.

ಶ್ರೀ ಎಚ್. ಡಿ. ದೇವೇಗೌಡ.—ಪ್ರಮೋಷನ್ ಕೊಡತಕ್ಕ ಕಾಲದಲ್ಲಿ ಸೆಲೆಕ್ಷನ್ ಮತ್ತು ಸೀನಿಯಾರಿಟಿ ಎರಡನ್ನೂ ಗಮನದಲ್ಲಿ ಇಟ್ಟುಕೊಂಡು ಪ್ರಮೋಷನ್ ಕೊಡುತ್ತೇವೆ ಎಂದು ಹೇಳಿದಿರಿ, ಅಂತಹ ಕಾಲದಲ್ಲಿ ಸರ್ಕಾರದವರು ಮಧ್ಯ ಪ್ರವೇಶಮಾಡಿ ಕೆಲವರಿಗೆ ಅನ್ಯಾಯವಾಗುವುದು ನಿಜವೆ?

Sri KONDAJJI BASAPPA.—It is a hypothetical question.

ಶ್ರೀ ಎಸ್. ಸುಬ್ಬಯ್ಯನಾಯಕ್.—ಬೇರೆ ಬೇರೆ ಇಲಾಖೆಗಳಲ್ಲಿ ಬೇರೆ ಬೇರೆ ತರಹದ ನಿಯಮಿತ ಮತ್ತು ಬಡ್ತಿ ಕೊಡುವ ಕ್ರಮ ಇದೆ, ಸರ್ಕಾರದ ಮುಂದೆ ಯಾವುದಾದರೂ ಇಲಾಖೆಗೆ ಇದೇ ರೀತಿ ಹೀಗೆ ಹೀಗೆ ಮಾಡಬೇಕೆಂಬ ಒಂದು ಮೂಲಾಧಾರ ಏನಾದರೂ ಇದೆಯೇ?

Sri KONDAJJI BASAPPA.—As I said, each department is guided by the advise of the P. S. C. depending on its nature and requirements. So, we cannot have a comprehensive decision with regard to all the departments and formulate rules.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳನ್ನು ಡೆಪ್ಯೂಟಿ ರಿಜಿಸ್ಟ್ರಾರ್ ಆಗಿ ಪ್ರಮೋಟ್ ಮಾಡತಕ್ಕ ಸಂದರ್ಭದಲ್ಲಿ ಈಗ ತಾವು ಅನುಸರಿಸುತ್ತಾ ಇರತಕ್ಕ ನಿಯಮಗಳೇನು? ಅವರ ಸೀನಿಯಾರಿಟಿ ಮತ್ತು ಕಾನ್‌ಫಿಡೆನ್ಷಿಯಲ್ ರಿಪೋರ್ಟ್‌ಗಳನ್ನು ನೋಡಿ ಪ್ರಮೋಟ್ ಮಾಡುತ್ತೀರಾ ಹೇಗೆ?

Sri KONDAJJI BASAPPA.—The question may not arise but still I will reply. I have said the P. S. C. has advised in the case of class I officers—it is promotion by selection. There is a Selection Committee. They go into the confidential report of individual officers and if they feel like interviewing the officers, they will interview them and send the recommendation to Government.

Amount provided for taking up National Rural Water Supply Programme under III Five-Year Plan in the State.

*Q.—245. Sri M. C. BASAPPA (Chamarajanagar).—

Will the Government be pleased to state :—

(*a*) the total amount provided for taking up National Rural Water Supply Programme und III Five-Year Plan in the State;

(*b*) the progress achieved so far in this behalf;

(*c*) the places selected under National Rural Water Supply Programme in Chamarajanagar Taluk;

(*d*) whether any estimates have been prepared in this behalf and if so, how many are sanctioned;

(*e*) what is the percentage of contribution expected to be paid by the villagers?

A.—Sri RAMAKRISHNA HEGDE.—Minister for Development Panchyati Raj and Co-operation).

(*a*) Rs. 100·00 lakhs.

(*b*) An expenditure of Rs. 50·84 lakhs has been incurred up to the end of November 1964.

(*c*) (1) Heggavadipura, (2) Honganur.

(*d*) No.

(*e*) 10 per cent.

ಶ್ರೀ ಎಂ. ಸಿ. ಬನಪ್ಪ.—ಈ ಹಳ್ಳಿಗಳನ್ನು ತಾವು ಸೆಲೆಕ್ಟ್ ಮಾಡುವಾಗ ತಾಲ್ಲೂಕು ಬೋರ್ಡನ್ನು ಏನಾದರೂ ಕನ್‌ಸಲ್ಟ್ ಮಾಡಿ ಮಾಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಹಳ್ಳಿಗಳನ್ನು ನಾವು ಸೆಲೆಕ್ಟ್ ಮಾಡುವುದಿಲ್ಲ. ಪಂಚಾಯ್ತಿ ಅಥವಾ ತಾಲ್ಲೂಕುಬೋರ್ಡ್ ಇಂದ ಇಂತಹ ಪಂಚಾಯ್ತಿ ಏರಿಯಾದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕೆಂದು ರೆಪ್ರಸೆಂಟೇಷನ್ ಬಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಸಿ. ಬನಪ್ಪ.—ನನ್ನ ಪ್ರಶ್ನೆ ಚಾಮರಾಜನಗರ ತಾಲ್ಲೂಕಿನಲ್ಲಿ ನೀರು ನರಬರಾಜು ಕಾರ್ಯಕ್ರಮದ ಮೇರೆಗೆ ಆಯ್ಕೆ ಮಾಡಲಾಗಿರುವ ಸ್ಥಳಗಳಾವುವು ಎಂದು ಹೇಳಿದ್ದೇನೆ. ಅದಕ್ಕೆ ಹೆಗ್ಗವಾಡಿಪುರ ಮತ್ತು ಹೊಂಗನೂರು ಎಂದು ಹೇಳಿದ್ದೀರಿ . ಎಂದಮೇಲೆ ಸರ್ಕಾರದವರೇ ಸೆಲೆಕ್ಟ್ ಮಾಡಿದೆ ಎಂದಾಯಿತು. ಆ ಎರಡು ಹಳ್ಳಿಗಳಿಂದ ಅಪ್ಲಿಕೇಷನ್‌ಗಳು ಬಂದಿದ್ದವೇ ? ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರು ಬೇರೆ ಹಳ್ಳಿಗಳನ್ನೂ ತೆಗೆದುಕೊಳ್ಳಬೇಕಾದ ಅಗತ್ಯ ಇವೆ ಎಂದು ಹೇಳಿ ಕಳುಹಿಸಿಕೊಟ್ಟದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಗಮನಕ್ಕೆ ಬಂದಿಲ್ಲ.

Sri M. Y. GHORPADE.—May I know the total cost of the estimates now pending sanction and of which how much is likely to be sanctioned in this financial year ?

Sri RAMAKRISHNA HEGDE.—We have sent up a proposal costing about 8 crores to Government of India covering about 700 villages in this connection.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಳ್ಳಿಗಳನ್ನು ಸೆಲೆಕ್ಟ್ ಮಾಡಬೇಕಾದರೆ ಡಿಸ್ಟ್ರಿಕ್ಟ್‌ವೈಸ್ ಸೆಲೆಕ್ಟ್ ಮಾಡುತ್ತೀರಾ ? ಕೆಲವು ಡಿಸ್ಟ್ರಿಕ್ಟ್‌ಗಳನ್ನು ಕಡೆಗಣಿಸಿ ತಕ್ಷಣಕ್ಕೆ ಬೇಕಾದ ಕಡೆ ರೂರಲ್ ವಾಟರ್ ಸಪ್ಲೈ ಸ್ಕೀಂ ತೆಗೆದುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಯಾವ ಒಂದು ಡಿಸ್ಟ್ರಿಕ್ಟಿನ ವಿಷಯ ಅಲ್ಲ. ಎಲ್ಲಾ ಡಿಸ್ಟ್ರಿಕ್ಟ್‌ಗಳೂ ಮೈಸೂರು ರಾಜ್ಯದ ಡಿಸ್ಟ್ರಿಕ್ಟ್‌ಗಳೇ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಾಗಾಗಾದರೆ ಹಾನನ ಡಿಸ್ಟ್ರಿಕ್ಟ್‌ನ್ನು ಏಕೆ ತೆಗೆದು ಕೊಳ್ಳಲಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರನ್ನು ಒದಗಿಸಬೇಕೆಂಬುದೇ ನಮ್ಮ ಉದ್ದೇಶ. ಹಾಸನ ಡಿಸ್ಟ್ರಿಕ್ಟ್‌ಗೂ ಕೊಟ್ಟಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಸರ್ಕಾರ ಗ್ರಾಮಾಂತರ ಪ್ರದೇಶಗಳಿಗೆ ನೀರನ್ನೊದಗಿಸುವ ಪ್ರಯತ್ನದಲ್ಲಿ 17 ವರ್ಷಗಳಿಂದ ವಿಫಲವಾಗಿದೆ. ಆದುದರಿಂದ ಈ ಬಗ್ಗೆ ಗ್ರಾಮಾಂತರ ಪ್ರದೇಶಗಳಿಗೆ ನರಿಯಾಗಿ ನೀರು ನರಬರಾಯಿ ಮಾಡಲು ಬೇಕಾದ ಮಾಹಿತಿ ತರಿಸಿ ಏನಾದರೂ ಯೋಚನೆಯನ್ನು ಮಾಡಿದೆಯೇ? ಮಾಡಿದ್ದರೆ ಅದು ಯಾವಾಗ ಕಾರ್ಯರೂಪಕ್ಕೆ ಬರುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.—ಸರ್ಕಾರ ವಿಫಲವಾಗಿದೆಯೆಂದು ಹೇಳಿರುವುದನ್ನು ನಾನು ಒಪ್ಪುವುದಿಲ್ಲ. ವಿವರವಾಗಿ ಇದರ ವಿಚಾರವನ್ನು ಈಗಾಗಲೆ ನಾನು ಒಂದೆರಡು ಬಾರಿ ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಒಟ್ಟು 7 ಸಾವಿರ ಗ್ರಾಮಗಳಲ್ಲಿ ಸಾಕಾದಷ್ಟು ಕುಡಿಯುವ ನೀರಿನ ಬಾವಿಗಳಿಲ್ಲ. ಆದಕ್ಕಾಗಿ ಸರ್ಕಾರ ಒಂದು ಸಮಗ್ರವಾದ ಯೋಜನೆಯನ್ನು ಮಾಡಿದೆ. ಸುಮಾರು 24 ಕೋಟಿ ರೂಪಾಯಿಗಳ ಖರ್ಚಿನಲ್ಲಿ ಹಳ್ಳಿಗಳಿಗೆ ನೀರು ನರಬರಾಯಿ ಮಾಡಲು ಸರ್ಕಾರ ಉದ್ದೇಶಪಟ್ಟಿದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ.—ಎಷ್ಟು ಗ್ರಾಮಗಳಿಗೆ ಯೋಜನೆ ತಯಾರಾಗಿದೆ ? ಎಷ್ಟು ಕೆಲಸ ತೆಗೆದುಕೊಳ್ಳಲಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಇದುವರೆಗೆ 250 ಸ್ಕೀಮುಗಳನ್ನು ತೆಗೆದುಕೊಂಡಿದ್ದೇವೆ.

Sri G. V. GOWDA.—Since you have hardly spent Rs. 50 lakhs within 3½ years, will you be able to spend the entire amount allotted for the State ?

Sri RAMAKRISHNA HEGDE.—I am quite confident that the entire amount will be spent; perhaps we may exceed the financial target.

ಶ್ರೀ ಎಂ. ಸಿ. ಬಸಪ್ಪ.—(ಇ) ಪ್ರಶ್ನೆಗೆ ಉತ್ತರವಾಗಿ ಅಂದಾಜು ತಯಾರು ಮಾಡಿಲ್ಲ ಎಂದು ಹೇಳಿದೆ. ಯಾವಾಗ ತಯಾರು ಮಾಡಲಾಗುವುದು ? ಇದುವರೆಗೇಕೆ ಮಾಡಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಹೆಗ್ಗವಾಡಿಪುರದ್ದು ತಯಾರಿಸದಿರುವುದಕ್ಕೆ ಕಾರಣ ಆಲ್ಲಿನ ಗ್ರಾಮಪಂಚಾಯಿತಿ ಡಿಸಾಲ್ವ್ ಆಗಿದೆ. ಅದು ಲೋಕಲ್ ಅಥಾರಿಟಿಯಾದ್ದರಿಂದ ಸ್ವಲ್ಪ ತೊಂದರೆ ಯಾಗಿದೆ. ಹೊಂಗನೂರಿನಲ್ಲಿ ಸಂಬಂಧಪಟ್ಟ ಪಂಚಾಯಿತಿ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಒಪ್ಪಿಲ್ಲ.

Sri K. P. GADAG.—What is the amount likely to be spent during this year for this programme ?

Sri RAMAKRISHNA HEGDE.—We might sp end more than Rs. 25 lakhs during the current year.

ಶ್ರೀ ಕೆ. ಲಕ್ಕಪ್ಪ.—66-67ನೆಯ ಇಸವಿಯೊಳಗಾಗಿ ನೀರು ಸರಬರಾಯಿ ಕೆಲಸವನ್ನು ಮುಗಿಸುವುದಾಗಿ ನೀವು ಭರವಸೆ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮುಗಿಸಬೇಕೆಂಬುದೇ ನಮ್ಮ ಉದ್ದೇಶ. ಆ ರೀತಿ ಮಾಡಲು ಬೇಕಾದಷ್ಟು ಪ್ರಯತ್ನಮಾಡುತ್ತೇವೆ.

ಶ್ರೀ ಡಿ. ಎಂ. ಸಿದ್ದಯ್ಯ.—ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದೆಯೆಂದೂ ಅದರಲ್ಲಿ 50.84 ಲಕ್ಷ ರೂಪಾಯಿಗಳು ಖರ್ಚಾಗಿದೆಯೆಂದು ಹೇಳಿದೆ. ಉಳಿದ ಹಣ ಖರ್ಚು ಮಾಡದಿರುವುದಕ್ಕೆ ಕಾರಣ ಏಂದಾಜು ಬಂದಿಲ್ಲವೇ ? ಅಥವ ಮಂಜೂರಾಗಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಂದಾಜುಗಳು ಬಂದಿವೆ, ಸರಕಾರ ಅದರ ಬಗ್ಗೆ ಪ್ರತ್ಯೇಕ ಸಿಬ್ಬಂದಿ ಏರ್ಪಾಡುಮಾಡಿದೆ. ಎಲ್ಲಾ ಜಿಲ್ಲೆಗಳಿಂದಲೂ ಅಂದಾಜು ಮತ್ತು ಪ್ಲಾನುಗಳು ಬಂದಿವೆ. ಈ ವರ್ಷ ಸುಮಾರು 700 ಹಳ್ಳಿಗಳಿಗೆ ನೀರು ಸರಬರಾಯಿ ಮಾಡುವ ವಿಚಾರದಲ್ಲಿ 8 ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿದ್ದೇವೆ. ಅದು ಮಂಜೂರು ಆಗಿ ಬಂದ ನಂತರ ಬಹುಶಃ ಒಂದೆರಡು ವರ್ಷಗಳಲ್ಲಿ ಎಲ್ಲಾ ಹಳ್ಳಿಗಳ ಕೆಲಸವನ್ನೂ ಮಾಡಲಿದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನಗರ, ಸಿಟಿ, ಟೌನು ಮತ್ತು ಹಳ್ಳಿಗಳ ವಿಚಾರ ಹೋಲಿಕೆ ಮಾಡಿದರೆ ಹಳ್ಳಿಗಳನ್ನುಳಿದು ಇತರೆ ಸಿಟಿ ಪಗೈರೆ ಭಾಗಗಳಿಗೇ ಕೋಟಿಗಟ್ಟಲೆ ಹಣ ಖರ್ಚಾಗುತ್ತಿದೆ. ಈ ಅನ್ಯಾಯವನ್ನು ತಪ್ಪಿಸಿ ಹಳ್ಳಿಗಳಿಗೆ ಗಮನಕೊಡಲು ಇನ್ನೂ ಎಷ್ಟು ಕಾಲ ಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಅನ್ಯಾಯಮಾಡುತ್ತಿದ್ದಾರೆಂದು ಹೇಳುವುದೇ ದೊಡ್ಡ ಅನ್ಯಾಯ. ಪ್ರತಿಯೊಂದು ಹಳ್ಳಿಗೂ ಆದ್ಯತೆ ನೀಡಿ ಪ್ರಾಮುಖ್ಯತೆ ಕೊಡುವುದು ನಮ್ಮ ಕರ್ತವ್ಯ. ಅದರಂತೆ ಕೊಡುತ್ತಿದ್ದೇವೆ ಅದರೆ ಈಗಾಗಲೆ ಅನೇಕ ಸಂದರ್ಭಗಳಲ್ಲಿ ಹೇಳಿದಂತೆ ಕೆಲವು ತೊಂದರೆಗಳಿವೆ. ಅದರಿಂದ ನಮ್ಮ ಕೆಲಸ ನಿಧಾನವಾಗಿದೆ. ಹಣದ ಕಾರಣದಿಂದ ನಿಧಾನ ಮಾಡುತ್ತಿಲ್ಲ ಎಂದು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ.

ಶ್ರೀ ಟಿ. ಕೆ. ಕಂಬಳಿ.—ಬಾವಿ ಇಲ್ಲದಿರುವಕಡೆ ಕೆರೆಕಟ್ಟೆಗಳಿಂದ ನೀರನ್ನೊದಗಿಸಲು ಅವಕಾಶ ಮಾಡಲು ಸಾಧ್ಯವೇ ?

ಶ್ರೀ ರಾಮಕೃಷ್ಣ ಹೆಗಡೆ.—ಓಟ್ಟಿನಲ್ಲಿ ನೀರು ಸರಬರಾಯಾಗಬೇಕಾದ್ದು ಮುಖ್ಯ.

ಶ್ರೀ ಡಿ. ಮುನಿಚಿನ್ನಪ್ಪ.—ಎಚ್. ಎ. ಎಲ್. ಪ್ರದೇಶದಲ್ಲಿ 2-3 ಬೋರ್‌ವೆಲ್‌ಗಳನ್ನು ತೆಗೆಯಬೇಕು. ನೀರಿಗೆ ತೊಂದರೆಯುದೆ ಎಂದು ಎರಡು ವರ್ಷಗಳಲ್ಲಿ ಒಂದು ಪ್ರಶ್ನೆ ಕಳುಹಿಸಿದ್ದರೂ ಕಾರ್ಯಕ್ರಮ ತೆಗೆದುಕೊಂಡಿಲ್ಲದಿರುವುದಕ್ಕೆ ಕಾರಣವೇನು ?

Sri RAMAKRISHNA HEGDE.—I am afraid that supplementary does not relate to this question.

ಶ್ರೀ ಎಂ. ಸಿ. ಬಸಪ್ಪ.—ಹಗ್ಗವಾಡಿಪುರದ ಪಂಚಾಯಿತಿ ಡಿಸಾಲ್ವ್ ಆಗಿದೆ ಮತ್ತು ಹೊಂಗನೂರು ಪಂಚಾಯಿತಿ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಒಪ್ಪುವುದಿಲ್ಲ ಎಂದು ಹೇಳಿದ್ದು ಸತ್ಯಕ್ಕೆ ದೂರವಾದುದು. ಕಾಂಟ್ರಿಬ್ಯೂಷನ್ ಕೊಟ್ಟರೆ ನೂಕ್ಕ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಕಾಂಟ್ರಿಬ್ಯೂಷನ್ ಕೊಡುವುದಕ್ಕೊಪ್ಪಿದರೆ ಅಲ್ಲಿನ ಕೆಲಸ ಮಾಡಿಸಲು ನಾವು ಜವಾಬ್ದಾರಿ ಹೊತ್ತುಕೊಳ್ಳುತ್ತೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಒಂದು ಕೋಟಿ ರೂಪಾಯಿಗಳ ಅಂದಾಜು ವಸಡಿದೆ, 50.84 ಲಕ್ಷ ಖರ್ಚಾಗಿದೆ ಎಂದು ಹೇಳಿದೆ. ಇದರಲ್ಲಿ ಯಾವುದು ನಿಜ?

ಅಧ್ಯಕ್ಷರು.—ಎರಡೂ ನಿಜ.

ಶ್ರೀ ಎಸ್. ಎಂ. ಗುರೆಡ್ಡಿ.—ಕೆಲವೊಂದು ಗ್ರಾಮದ ಜನರು ಸರ್ಕಾರ ಕೇಳಿದ ಪ್ರಕಾರ ಶೇಕಡ 25 ಭಾಗ ಪಂಚಾಯತಿ ಕಾಂಟ್ರಿಬ್ಯೂಷನ್ ಕೊಡಲು ಸಿದ್ಧವಾಗಿದ್ದರೂ ಈ ಯೋಜನೆಯನ್ನು ಆ ಗ್ರಾಮಗಳಲ್ಲಿ ಜಾರಿಗೆ ತರದಿರಲು ಕಾರಣವೇನು?

ಶ್ರೀ ರಾಮಕೃಷ್ಣ ಹೆಗಡೆ.— ಅಂಥ ಎಲ್ಲ ಸಂದರ್ಭಗಳಲ್ಲೂ ಅಂದಾಜು ಮಾಡಿದ್ದೇವೆ; ಯಾವು ದನ್ನೂ ಬಿಟ್ಟಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಶೇಕಡ ಹತ್ತರಷ್ಟು ಒದಗಿಸಲು ಮುಂದೆ ಬಂದಿರುವವರಿಗೆ ಬೇರೆ ತತ್ವ ಅನುಸರಿಸಿ ಅವಕಾಶ ಕೊಡರಾಗಿದೆಯೇ? ಅದೇ ತತ್ವವನ್ನು ನಾಲ್ಕನೆಯ ಪಂಚ ವಾರ್ಷಿಕ ಯೋಜನೆಯಲ್ಲೂ ಅನ್ವಯವಾಗುವುದೇ?

ಶ್ರೀ ರಾಮಕೃಷ್ಣ ಹೆಗಡೆ.—ನಾಲ್ಕನೆ ಯೋಜನೆ ವಿಚಾರ ಈಗ ಹೇಳುವುದಕ್ಕಾಗುವುದಿಲ್ಲ. ಈಗ 3ನೆಯ ಯೋಜನೆಯಲ್ಲಿರುವ ತೊಂದರೆ ನೋಡಿ ಮೊದಲಿದ್ದ ಕಂಡೀಷನ್ ಶೇಕಡ 25 ಭಾಗ ಕೊಡಬೇಕೆಂದಿದ್ದುದಕ್ಕೆ ಸ್ವಲ್ಪ ರಿಯಾಯಿತಿ ಕೆಲ ಸಂದರ್ಭಗಳಲ್ಲಿ ತೋರರಾಗಿದೆ. ಅನೇಕ ಪಂಚಾ ಯಿತಿಗಳಿಗೆ ಅಷ್ಟು ಕೊಡಲು ಶಕ್ತಿ ಇಲ್ಲದಿರುವುದರಿಂದ ಸರಕಾರ ಶೇಕಡ 10 ಭಾಗ ಪಡೆದು ಉಳಿದ ಖರ್ಚನ್ನು ವಹಿಸಿಕೊಳ್ಳುತ್ತದೆ.

ಶ್ರೀ ಎಫ್. ಎಸ್. ತಾವರೆ.—ಸಾಧಾರಣವಾಗಿ ಈಗ ಸಣ್ಣ ಹಳ್ಳಿಗಳಲ್ಲಿ ತೊಂದರೆಯಾಗುತ್ತಿದೆ. ನಾಲ್ಕು ಗ್ರಾಮಗಳನ್ನು ಕೂಡಿಸಿ ಗ್ರೂಪ್ ಪಂಚಾಯಿತಿ ಮಾಡುತ್ತಾರೆ. ಅದಕ್ಕೆ ಆದಾಯ ಸಾಕಷ್ಟಿಲ್ಲದಿರುವಾಗ ಶೇಕಡ ಹತ್ತರಷ್ಟು ಕೊಡುವುದಕ್ಕೂ ತೊಂದರೆಯಾಗಿರುವಾಗ ಏನು ಮಾಡು ತ್ತೀರಿ?

ಶ್ರೀ ರಾಮಕೃಷ್ಣ ಹೆಗಡೆ.—ತೀರ ಸಣ್ಣ ಹಳ್ಳಿಗಳಲ್ಲಿ ಬಾವಿಗಳನ್ನು ತೆಗೆಯುವುದಕ್ಕೇ ಬೇರೆ ಯೋಜನೆ ಇದೆ. ಇದು ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಅಥವಾ ಪೈಪ್ ವಾಟರ್ ಸಪ್ಲೈಗೆ ಸಂಬಂಧ ಪಟ್ಟಿದೆ. ಯಾವುದಾದರೂ ಗ್ರಾಮ ಅತಿ ಕಷ್ಟ ಪರಿಸ್ಥಿತಿಯಲ್ಲಿದ್ದು ಕ್ಷಾಮಕ್ಕೆ ತುತ್ತಾಗುತ್ತಿದ್ದರೆ ನೂರು ಭಾಗ ಖರ್ಚನ್ನೂ ಸರಕಾರವೇ ವಹಿಸುವುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹಣದ ಕೊರತೆ ಇರುವಾಗ ಹೇಗೆ ಪಸೂಲು ಮಾಡುತ್ತೀರಿ? ಮಾನ್ಯ ಸಚಿವರು ಪಾಶ್ಚಾತ್ಯ ದೇಶದ ಪ್ರವಾಸ ಮಾಡಿಕೊಂಡು ಬಂದನಂತರ ಅಲ್ಲಿನ ಅನುಭವದ ಮೇಲೆ ಹೊಸದಾಗಿ ಏನು ಕ್ರಮ ಕೈಕೊಂಡಿದ್ದಾರೆ?

Mr. SPEAKER.—The last portion is disallowed.

ಶ್ರೀ ರಾಮಕೃಷ್ಣ ಹೆಗಡೆ.—ಗ್ರಾಮಪಂಚಾಯಿತಿಗಳು ತಮ್ಮ ಭಾಗವನ್ನು ಕೊಡುವುದಾಗಿ ಮುಂದೆ ಬರುವುದು ಬಹಳ ಕಷ್ಟ. ಅನೇಕ ಕಡೆ ವೈಯಕ್ತಿಕವಾಗಿ ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಕೂಡ ಸಹಾಯ ಮಾಡುವಂತೆ ತಿಳಿಸಲಾಗಿದೆ.

9-30 A.M.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಜಲಾಶಯಗಳ ಕಾಲುವೆಗಳಲ್ಲಿ ಹರಿಯತಕ್ಕ ನೀರನ್ನು ಈ ಯೋಜನೆಯಿಂದ ಉಪಯೋಗಮಾಡಿಕೊಳ್ಳಬಹುದೇ, ಸ್ವಾಮಿ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ನಾನು ಈಗ ಉತ್ತರ ಹೇಳುವುದು ಕಷ್ಟವಾಗುತ್ತದೆ.

ಶ್ರೀ ಜಿ. ರಾಮೇ ಗೌಡ.—ಕುಡಿಯುವ ನೀರಿನ ಸಲುವಾಗಿ ನೂರಕ್ಕೆ 10 ಭಾಗ ಕೊಡುವು ದಲ್ಲದೆ, ಯೋಜನೆ ಪೂರೈಸಿದ ಮೇಲೆ ಆದರ ಮೇಂಟೆನೆನ್ಸ್‌ಗೋಸ್ಕರ ಪಂಚಾಯಿತಿಯಿಂದ ಒಂದು ಕರಾರು ಬರೆದುಕೊಡಬೇಕೆಂದು ಕೇಳಿದ್ದಾರಲ್ಲವೇ, ಸ್ವಾಮಿ?

ಶ್ರೀ ರಾಮಕೃಷ್ಣ ಹೆಗಡೆ.—ಹೌದು.

ಶ್ರೀ ಎನ್. ನುಚ್ಚಯ್ಯ ನಾಯಕ್.—(ಇ) ಭಾಗಕ್ಕೆ ಉತ್ತರವಾಗಿ ಗ್ರಾಮಗಳವರು ಶೇಕಡ 10 ಅಂಶ ಸಹಾಯ ಕೊಡಬೇಕು ಎಂದು ಹೇಳಿದ್ದಾರೆ. ಎಷ್ಟೋ ಪಂಚಾಯಿತಿಗಳಿಗೆ ಇದನ್ನು ಪೂರೈಸುವುದಕ್ಕಾಗುತ್ತಿಲ್ಲ. ಇಂಥ ಸಂದರ್ಭಗಳಲ್ಲಿ ತಾಲ್ಲೂಕು ಬೋರ್ಡ್ ಆ ಕೆಲಸವನ್ನು ವಹಿಸಿಕೊಂಡು ಮಾಡುವ ಹಾಗೆ ಮತ್ತು ಗ್ರಾಮದವರು ಒಪ್ಪಿಕೊಂಡು 10 ಅಂಶ ಕೊಡುವುದಾದರೆ ಅದಕ್ಕೆ ಸರ್ಕಾರದಿಂದ ಅನುಮತಿ ಕೊಡರಾಗುತ್ತದೆಯೇ, ಸ್ವಾಮಿ?

ಶ್ರೀ ರಾಮಕೃಷ್ಣ ಹೆಗಡೆ.—ಗ್ರಾಮಸ್ಥರು ಸೇರಿ ಶೇಕಡ 10 ಅಂಶ ಕೊಟ್ಟರೆ ಅದು ಒಂದು ಭಾಗ ಮಾತ್ರ ಆಯಿತು. ಈಗತಾನೆ ಮತ್ತೊಬ್ಬ ಸದಸ್ಯರು ಕೇಳಿದ ಹಾಗೆ ಒಂದು ನಲ ನೀರು ಪೂರೈಕೆ ಯೋಜನೆ ತಯಾರಾದ ಮೇಲೆ ಅದನ್ನು ಮೇಂಟೇನ್ ಮಾಡತಕ್ಕ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳಬೇಕು ಎನ್ನುವುದನ್ನು ಕೂಡ ನಿರ್ದಿಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಊರಿನವರೆಲ್ಲ ಸೇರಿ ಮೇಂಟೇನ್ ಮಾಡತಕ್ಕ ಪ್ರಶ್ನೆ ಬರುತ್ತದೆ. ಅದು ಸಾಧ್ಯವಾಗುವುದಿಲ್ಲ. ಆ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಯವರು ತೆಗೆದುಕೊಳ್ಳಬೇಕು ಅಥವಾ ತಾಲ್ಲೂಕು ಬೋರ್ಡ್ ಸಹಾಯ ಮಾಡಬೇಕು. ಬರಗಾಲ ಪ್ರದೇಶಗಳಲ್ಲಿ ಆದರೆ ಸರ್ಕಾರದವರು ಯಾವ ತರಹ ದೇಣಿಗೆಯನ್ನೂ ತೆಗೆದುಕೊಳ್ಳದೆ ನೀರು ಪೂರೈಕೆ ಕೆಲಸವನ್ನು ಮಾಡಿಸಿಕೊಡುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಎಂಟು ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸಲಾಗಿದೆ ಎಂದು ಹೇಳಿದರು. ಅದನ್ನು ಯಾವಾಗ ಕಳಿಸಲಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ನಮಗೆ ಇರುವಂಥ ಯೋಜನೆಯ ಒಟ್ಟು ಅಂದಾಜು 24 ಕೋಟಿ ರೂಪಾಯಿಗಳು. ಅದರಲ್ಲಿ ಪೊದಲನೆ ಹಂತವಾಗಿ 8 ಕೋಟಿ ರೂಪಾಯಿಗಳ ಯೋಜನೆಯನ್ನು ಈಗಾಗಲೇ ಕೇಂದ್ರಕ್ಕೆ ಕಳಿಸಿಕೊಟ್ಟಿದ್ದೇವೆ. ಅದನ್ನು ಕಳಿಸಿಕೊಟ್ಟು ನಾಲ್ಕು ತಿಂಗಳಾಯಿತು.

Mr. SPEAKER.—Question hour is over.

QUESTION FOR ANSWER ON THE DAY

(but not taken up)

Sanction of Revised Estimate for the construction of a Tank near Yalladakere in Hiriyur Taluk.

*Q.—283. Sri V. MASIYAPPA (Hiriyur).—

Will the Government be pleased to state :—

(*a*) whether revised estimate for the construction of a tank near Yalladakere in Hiriyur Taluk is sanctioned ;

(*b*) if so, whether the construction work is taken up ?

A—Sri ALUR HANUMANTHAPPA (Deputy Minister for Minor Irrigation) —

(*a*) No.

(*b*) Does not arise in view of reply to clause (*a*).

CRIMINAL PROCEDURE CODE (MYSORE AMENDMENT) BILL, 1965.

(Introduced.)

Sri M. V. RAMA RAO (Minister for Law).—I introduce the Code of Criminal Procedure (Mysore Amendment) Bill, 1965.

Mr. SPEAKER.—The Code of Criminal Procedure (Mysore Amendment) Bill, 1965, is introduced.